ಇ) ಪರಿಶೀಲನೆಯಲ್ಲಿದೆ.

ಉ) ಕಾಮಗಾರಿ ಕೈಗೆತ್ತಿಕೊಂಡು 2 ವರ್ಷಗಳಲ್ಲಿ ಪೂರ್ಣಗೊಳಿಸಲಾಗುವುದು.

2287(3094) ಶ್ರೀ ಈಶ್ವರಪ್ಪ ಕೆ.ಎಸ್. (ಶಿವಮೊಗ್ಗ):- ಮಾನ್ಯ ಪೌರಾಡಳಿ ಮತ್ತು ಕೆ.ಯು.ಐ.ಡಿ.ಎಫ್.ಸಿ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಶಿವಮೊಗ್ಗ ನಗರ ವ್ಯಾಪ್ತಿಯಲ್ಲಿ ರಸ್ತೆಗಳು ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ರಸ್ತೆ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಸರ್ಕಾರ ಹಣ ಬಿಡುಗಡೆ ಮಾಡುವುದೇ;

ಇ) ಯಾವುದಾದರೂ ಯೋಜನೆಯಡಿ ಈ ರಸ್ತೆ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಸರ್ಕಾರಕ್ಕೆ ಇರುವ ತೊಂದರೆಗಳೇನು;

ಶ್ರೀ ಎಸ್. ಆರ್. ಮೋರೆ (ಪೌರಾಡಳಿತ ಮತ್ತು ಕೆ.ಯು.ಐ.ಡಿ.ಎಫ್.ಸಿ. ಸಚಿವರು):-

ಅ) ಹೌದು

ಆ) IIನೇ ಹಣಕಾಸು ಯೋಜನೆಯಡಿಯಲ್ಲಿ ಹಣ ಬಿಡುಗಡೆ ಮಾಡಲಾಗಿದೆ.

ಇ) ರಸ್ತೆ ದುರಸ್ತಿ ಮತ್ತು ಅವುಗಳ ನಿರ್ವಹಣೆ ನಗರ ಸಭೆಯ ಹೊಣೆ ಜವಾಬ್ದಾರಿಯಾಗಿರುತ್ತದೆ.

2288(3229) ಶ್ರೀ ಗಡ್ಡದೇವರಮಠ್ ಗಡ್ಡಯ ಶಿವಮೂರ್ತಯ್ಯ (ಶಿರಹಟ್ಟಿ): ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಗದಗ ಜಿಲ್ಲೆಯಲ್ಲಿ ಗದಗನ್ನು ಬಿಟ್ಟರೆ ಎರಡನೇ ಹತ್ತಿ ಬೆಳೆಯುವ ಹಾಗೂ ಮಾರುವ ಹಾಗೂ ಸಂಗ್ರಹವಾಗುವ ದೊಡ್ಡ ಪೇಟೆ ಲಕ್ಷೇಶ್ವರ ಅನ್ನುವುದು ಸರ್ಕಾರದ ಗಮನದಲ್ಲಿದೆಯೇ;

ಆ) ಲಕ್ಷೇಶ್ವರದಲ್ಲಿ 1 ಸ್ಪಿನಿಂಗ್ ಮಿಲ್, 2 ಹತ್ತಿ ಸ್ಪಿನ್ನಿಂಗ್ ಮಿಲ್, 28 ಹತ್ತಿ ರಾಟೆಗಳು ಇವು ಸುರಕ್ಷಿತ ದೃಷ್ಟಿಯಿಂದ ಅಗ್ನಿಶಾಮಕ ಠಾಣೆಯ ಅವಶ್ಯಕತೆ ಇದ್ದುದರ ಬಗ್ಗೆ 2002 ರ ಸರ್ಕಾರದ ಗಮನಕ್ಕೆ ತರಲಾಗಿದ್ದರೂ ಅಗ್ನಿಶಾಮಕ ಠಾಣೆಯನ್ನು ಪ್ರಾರಂಭಿಸದಿರಲು ಕಾರಣವೇನು

ಇ) ಎ.ಪಿ.ಎಂ.ಸಿ. ಲಕ್ಷೇಶ್ವರದವರು ಇದಕ್ಕಾಗಿ 2 ಎಕರೆ ಜಮೀನನ್ನು ಅಗ್ನಿಶಾಮದಳದವರಿಗೆ ಹಸ್ತಾಂತರಿಸಲು ಒಪ್ಪಿದ್ದು ನಿಜವಲ್ಲವೆ;

ಈ) ಹಾಗಿದ್ದಲ್ಲಿ ಅಗ್ನಿಶಾಮಕ ಠಾಣೆಯನ್ನು ಯಾವಾಗ ಮಂಜೂರು ಮಾಡಲಾಗುವುದು;

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು):-

ಅ) ಒಳಾಡಳಿತ ಮತ್ತು ಸಾರಿಗೆ ಇಲಾಖೆಯ ಗಮನಕ್ಕೆ ಬಂದಿರುವುದಿಲ್ಲ.

ಅ) ಈಗಾಗಲೇ ಮಂಜೂರು ಮಾಡಿರುವ 27 ಹೊಸಠಾಣೆಗಳನ್ನು ಪ್ರಾರಂಭಿಸಿದ ನಂತರ ಲಕ್ಷೇಶ್ವರಕ್ಕೆ ಅಗ್ನಿಶಾಮಕ ಠಾಣೆ ಮಂಜೂರು ಮಾಡುವ ಬಗ್ಗೆ ಈ ಹೊಸ ಠಾಣೆಗಳನ್ನು ಪ್ರಾರಂಭಿಸಿದ ನಂತರ ಪರಿಶೀಲಿಸಲಾಗುವುದು.

ಇ) ಎ.ಪಿ.ಎಂ.ಸಿ. ಲಕ್ಷೇಶ್ವರದವರು ಅಗ್ನಿಶಾಮಕ ಠಾಣೆ ಸ್ಥಾಪನೆಗಾಗಿ 2 ಎಕರೆ ಜಮೀನನ್ನು ನೀಡಲು ನಿರ್ಣಯ ಮಾಡಿರುವುದು ನಿಜ. ಆದರೆ ಸದರಿ ನಿವೇಶನವನ್ನು ಇಲ್ಲಿವರೆಗೂ ಅಗ್ನಿಶಾಮಕ ಇಲಾಖೆಯ ವಶಕ್ಕೆ ನೀಡಿರುವುದಿಲ್ಲ.

ಈ) ಈಗಾಗಲೇ ಮಂಜೂರು ಮಾಡಿರುವ 27 ಹೊಸ ಠಾಣೆಗಳನ್ನು ಪ್ರಾರಂಭಿಸಿದ ನಂತರ ಲಕ್ಷೇಶ್ವರಕ್ಕೆ ಅಗ್ನಿಶಾಮಕ ಠಾಣೆ ಮಂಜೂರು ಮಾಡುವ ಬಗ್ಗೆ ಪ್ರತ್ಯೇಕವಾಗಿ ಪರಿಶೀಲಿಸಲಾಗುವುದು.

2289(1851) ಶ್ರೀ ಗೋಪಾಲಕೃಷ್ಣ ಎನ್. ವೈ (ಮೊಳಕಾಲ್ಮೂರ್):–ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮೊಳಕಾಲ್ಮೂರು ಕ್ಷೇತ್ರದಲ್ಲಿ ಎಷ್ಟು ಕೆರೆಗಳಿವೆ (ಗ್ರಾಮವಾರು ವಿವರಗಳನ್ನು ನೀಡುವುದು):

ಆ) ಸರ್ಕಾರದ ದಾಖಲೆ ಪ್ರಕಾರ ಅವುಗಳ ವಿಸ್ತೀರ್ಣ (ಉದ್ದ, ಅಗಲ) ವೆಷ್ಟು (ಕೆರೆವಾರು ವಿವರ ನೀಡುವುದು):

ಇ) ಆ ಕೆರೆಗಳ ಜಾಗವನ್ನು ಅತಿಕ್ರಮಿಸಿರುವ ಒಟ್ಟು ವಿಸ್ತೀರ್ಣವೆಷ್ಟು (ಕೆರೆವಾರು, ಅತಿಕ್ರಮಣದಾರರವಾರು ವಿವರಗಳನ್ನು ಒದಗಿಸುವುದು);

ಈ) ಈ ಅತಿಕ್ರಮಣ ಪ್ರದೇಶವನ್ನು ವಶಪಡಿಸಿಕೊಂಡು ಮೋಜಣಿ ಮಾಡಿಸಿ ಬೇಲಿಯನ್ನು ನಿರ್ಮಿಸಲು ಸರ್ಕಾರ ಕ್ರಮ ಕೈಗೊಳ್ಳುವುದೆ;

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು):–

ಅ&ಆ)31 ಸಣ್ಣ ನೀರಾವರಿ ಕೆರೆಗಳಿವೆ. ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಇ) ಯಾವುದೂ ಇರುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಅನುಬಂಧ

ಚಿತ್ರದುರ್ಗ ಜಿಲ್ಲೆ ಮೊಳಕಾಲ್ಮೂರು ಕ್ಷೇತ್ರ

ಕ್ರ. ಸಂ.	ಗ್ರಾಮದ ಹೆಸರು	ಕಾಮಗಾರಿಯ ಹೆಸರು	ಅಚ್ಚುಕಟ್ಟು (ಹೆಕ್ಟೇರುಗಳಲ್ಲಿ)	ಕೆರೆವಾರು ವಿಸ್ತೀರ್ಣ
40 ರಿಂದ ಹೆಕ್ಟೇರೆಗಳವರೆಗಿನ ಕೆರೆಗಳ ಅಚ್ಚುಕಟ್ಟು				